ಅವನ ಮಾಲನ್ನು ಖರೀದಿ ಮಾಡುವಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ದಯವಿಟ್ಟು ತಾವು ಕೂಡಲೇ ಸಂಬಂಧಪಟ್ಟವರನ್ನು ಕರೆದು ಮಾತುಕತೆಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಈ ಗೋಧಿ ಉತ್ಪನ್ನಗಳ ಮೇಲೆ ಟ್ಯಾಕ್ಸನ್ನು ಹಾಕಿದ್ದೀರಿ. ಈ ಟ್ಯಾಕ್ಸನ್ನು ಹಾಕಿರುವುದರಿಂದ ನಮ್ಮಲ್ಲಿ ಎಲ್ಲಾ ಕಿರಾಣಿ ಅಂಗಡಿಗಳು, ಬೇಕರಿಗಳು, ಜನರಲ್ ಸ್ಟೋರ್ಸ್‌ಗಳು ಎಲ್ಲವೂ ಉತ್ತರ ಕರ್ನಾಟಕ, ಮುಂಬಯಿ ಕರ್ನಾಟಕ ಭಾಗದಲ್ಲಿ ನಗರ ಪ್ರದೇಶಗಳಲ್ಲಿ ಎಲ್ಲಾ ಅಂಗಡಿಗಳು ಕಳೆದ ಒಂದು ವಾರದಿಂದ ಬಂದ್ ಆಗಿದೆ. ಅದರ ಬಗ್ಗೆ ಸಂಬಂಧಿಸಿದವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅದಕ್ಕೆ ಸರ್ಕಾರ ಇನ್ನು ಪ್ರತಿಕ್ರಿಯೆಯನ್ನು ಮಾಡಿಲ್ಲ. ಇದರಿಂದ ಜನಜೀವನ ಸಾಕಷ್ಟು ತೊಂದರೆಯಾಗುತ್ತಿದೆ. ಸರ್ಕಾರದವರು ಕೂಡಲೇ ಅಲ್ಲಿಯ ಎಲ್ಲಾ ಪ್ರತಿನಿಧಿಗಳು ಬಂದಿದ್ದಾರೆ. ಸರ್ಕಾರದವರು ಕೂಡಲೇ ಅವರುಗಳ ಜೊತೆ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಿ ಬಂದ್ ಆಗಿರುವ ಎಲ್ಲಾ ಅಂಗಡಿಗಳು ಪುನರ್ ಪ್ರಾರಂಭವಾಗುವಂತೆ ಮಾಡಬೇಕು.

ಇ) ಗೋಧಿ ಉತ್ಪನ್ನದ ಮೇಲೆ ಹಾಕಿರುವ ಮಾರಾಟ ತೆರಿಗೆಯನ್ನು ರದ್ದುಗೊಳಿಸುವುದು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ಒಂದು ಬಜೆಟ್‌ನಲ್ಲಿ ಏನು ಟ್ಯಾಕ್ಸನ್ನು ಹಾಕಿದ್ದಾರೆ, ಇದರಿಂದ ಈ ಗೋಧಿಯಿಂದ ಮಾಡುವ ಪದಾರ್ಥಗಳಾದ ಚಪಾತಿ, ಬ್ರೆಡ್, ಬಿಸ್ಕತ್ ನಮ್ಮ ಉತ್ತರ ಕರ್ನಾಟಕದಲ್ಲಿ ಹೆಚ್ಚಿಗೆ ಬಡಜನರು ಉಪಯೋಗ ಮಾಡುತ್ತಾರೆ. ಬ್ರೆಡ್, ಬಿಸ್ಕತ್, ರೋಗಿಗಳು ಮತ್ತು ಚಿಕ್ಕಮಕ್ಕಳು ಉಪಯೋಗ ಮಾಡುವಂಥದ್ದು, ಇದರ ಮೇಲೆ ಟ್ಯಾಕ್ಸ್ ಹಾಕಿದ್ದರಿಂದ ಅಲ್ಲಿನ ಜನರಿಗೆ ಅನ್ಯಾಯವಾಗಿದೆ. ಗೋಧಿ ದಾನ್ಯ ಪದಾರ್ಥಗಳು ರೂರಲ್ ಮಿಲ್ಸ್ ಇದೆ, ಅದರಿಂದ ಏನು ಉದ್ಯೋಗಾವಕಾಶಗಳು ಸಿಗುತ್ತದೆ. ಈ ಒಂದು ಮಿಲ್ಸ್‌ಗಳಿಗೆ ಈ ಒಂದು ಹೊಡೆತ ಬಿದ್ದಿದೆ. ಹಿಂದೆ 1991ರಲ್ಲಿ ಮೊಯ್ಲಿಯವರ ಸರ್ಕಾರ ಗೋಧಿ ಉತ್ಪನ್ನದ ಬಗ್ಗೆ ಟ್ಯಾಕ್ಸನ್ನು ಹಾಕಿದಾಗ ಆಗ ಜನತಾದಳದವರು ವಿರೋಧಪಕ್ಷದಲ್ಲಿದ್ದರು. ಆಗ ಅವರು ಪ್ರೊಟೆಸ್ಟ್ ಮಾಡಿ ಅದನ್ನು ವಿತ್‌ಡ್ರಾ ಮಾಡಿಸಿದ್ದರು. ಮಹಾರಾಷ್ಟ್ರವಾಗಲಿ ಅಥವಾ ಇನ್ನಿತರ ರಾಜ್ಯಗಳಾಗಲಿ ಈ ಒಂದು ಗೋಧಿದಾನ್ಯ ಪದಾರ್ಥಗಳ ಮೇಲೆ ಯಾವುದೇ ರೀತಿಯ ಟ್ಯಾಕ್ಸ್ ಹಾಕಿಲ್ಲ. ನಮ್ಮ ರಾಜ್ಯದಲ್ಲಿ ಗೋಧಿ ಉತ್ಪನ್ನಗಳ ಮೇಲೆ ಟ್ಯಾಕ್ಸ್ ಹಾಕುತ್ತದೆ. ನಾವು ಉತ್ತರಭಾರತದಿಂದ ಗೋಧಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಅಲ್ಲಿ ಟ್ಯಾಕ್ಸ್ ಇರುವುದಿಲ್ಲ. ಅದನ್ನು ನಾವು ಇಲ್ಲಿ ತರಿಸುವುದರಿಂದ ಇವತ್ತು ನಮ್ಮಲ್ಲಿ ಆ ಒಂದು ಇಂಡಸ್ಟ್ರೀಸ್, ಫ್ಲೋರ್‌ಮಿಲ್‌ಗಳು ಎಲ್ಲವೂ ಬಂದ್ ಆಗುವಂತಹ ಪರಿಸ್ಥಿತಿ ಬಂದಿದೆ. ಜನಗಳಿಗೆ ಮೊದಲೇ ಏನೂ ಕೆಲಸವಿಲ್ಲ. ಅದರಲ್ಲಿ ಎಲ್ಲಾ ಇಂಡಸ್ಟ್ರೀಸ್‌ಗಳು ಬಂದ್ ಆಗಿ ಒಂದು ದೊಡ್ಡ ಹೊಡೆತ ನಮ್ಮ ಕಡೆ ಬೀಳುವುದರಲ್ಲಿ ಇದೆ. ದಯವಿಟ್ಟು ಈ ಟ್ಯಾಕ್ಸನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. ಕಳೆದ 16ನೇ

ತಾರೀಖಿನಿಂದ ಹುಬ್ಬಳ್ಳಿ, ಧಾರವಾಡ, ನಮ್ಮ ಉತ್ತರ ಕರ್ನಾಟಕ ಭಾಗಗಳಲ್ಲಿ ಎಲ್ಲಾ ಬ್ರೆಡ್, ಬೇಕರಿಗಳು ಫ್ಲೋರ್ ಮಿಲ್ಸ್‌ಗಳು ಎಲ್ಲಾ ಬಂದ್ ಆಗಿದೆ. ಅದಕ್ಕೆ ದಯವಿಟ್ಟು ತಕ್ಷಣ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಸರ್ಕಾರ ಏಕೆ ಕಣ್ಣುಮುಚ್ಚಿ ಕುಳಿತಿದೆಯೋ ನನಗೆ ಗೊತ್ತಿಲ್ಲ. ಎಪಿಎಂಸಿ ವ್ಯವಹಾರ ಸ್ಥಗಿತವಾಗಿ 14- 15 ದಿವಸಗಳಾಗಿದೆ. ಮಾರ್ಕೆಟ್‌ಗೆ ಹತ್ತಿಯನ್ನು ತೆಗೆದುಕೊಂಡು ಹೋದಂತವನು ಬೀದಿಪಾಲಾಗಿ ದಳ್ಳಾಳಿಗಳಿಗೆ ಅಂಗಡಿಯಲ್ಲಿ ಅದನ್ನು ಮಾರಿಬಿಟ್ಟು, ಹೇಳುವವರು ಕೇಳುವವರು ಇಲ್ಲದೆ ಕೊಟ್ಟಷ್ಟು ಹಣಕ್ಕೆ ಅದನ್ನು ಮಾರಿಬಿಡುತ್ತಿದ್ದಾನೆ. ಅವನ ಶೋಷಣೆ ಆಗುತ್ತಿದೆ. ಅದರ ಬಗ್ಗೆ ಸರ್ಕಾರ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ಇಲ್ಲಿ ನಾವು ಒಮ್ಮತದಿಂದ ಆಡಳಿತ ಪಕ್ಷ, ವಿರೋಧ ಪಕ್ಷ ಇಬ್ಬರೂ ಸೇರಿ ಒಟ್ಟಿಗೆ ಕುಳಿತುಕೊಂಡು ಯೋಚನೆಯನ್ನು ಗೋಧಿಹಿಟ್ಟಿನ ಮೇಲೆ ಹಾಕಿರುವ ತೆರಿಗೆಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹಣಕಾಸಿನ ಸಚಿವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಅವರು ಏನು ಹೇಳಿದರೂ ಸಹ ಒಪ್ಪಲಿಲ್ಲ. ಇದರ ಪರಿಣಾಮವಾಗಿ ರೂರಲ್ ಮಿಲ್ಸ್, ಫ್ಲೋರ್ ಮಿಲ್ಸ್ ಎಲ್ಲಾ ವ್ಯವಹಾರಗಳು ಬಂದ್ ಆಗಿದೆ. ಇನ್ನು ಮುಂದೆ ಬೇಕರಿ ತಯಾರು ಮಾಡುವುದಿಲ್ಲವೆಂದು ಅವರು ಹೇಳಿಕೊಂಡಿದ್ದಾರೆ. ಈ ಗುಟ್ಕಾ ಬಂದ್ ಆಗುತ್ತದೆಂಬ ಗಲಾಟೆಯಿಂದ ಅಡಿಕೆ ಮಾರುಕಟ್ಟೆ ಸಂಪೂರ್ಣವಾಗಿ ಸ್ಥಗಿತವಾಗಿ, ಅವರು ಕ್ಲೋಸ್ ಮಾಡಿ ಅಡಿಕೆ ಖರೀದಿ ಅಲ್ಲದೆ ಒಂದು ಚೀಲಕ್ಕೆ 3 ಸಾವಿರ 4 ಸಾವಿರ ಕಡಿಮೆಯಾಗಿ ರೈತನ ಶೋಷಣೆಯಾಗುತ್ತಿದೆ. ನಾನು ಇಲ್ಲಿ ವ್ಯಾಪಾರಸ್ಥರ ಬಗ್ಗೆ ಚಿಂತೆ ಮಾಡುತ್ತಿಲ್ಲ. ರೈತ ಉತ್ಪನ್ನ ಮಾಡುವ ಯಾವುದೇ ವಸ್ತುವನ್ನು ಇವತ್ತು ರಾಜ್ಯದಲ್ಲಿ ಕೇಳುವವರಿಲ್ಲದಂತಾಗಿ ಒಂದು ಗೊಂದಲ ವಾತಾವರಣ ಉಂಟಾಗಿದೆ. ಇವು 3 ಪ್ರಮುಖ ಅಂಶಗಳು. ಸರ್ಕಾರ ಈ ಬಗ್ಗೆ ಒಂದು ಸ್ಪಷ್ಟವಾದ ನಿರ್ಧಾರ ತೆಗೆದುಕೊಂಡು ಸಂಬಂಧಪಟ್ಟವರನ್ನು ಕರೆದು ಕನ್‌ವಿನ್ಸ್ ಮಾಡಿ ವ್ಯವಹಾರಗಳು ಪ್ರಾರಂಭವಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ ತಾನೇ? ಸರ್ಕಾರ ಇಷ್ಟೆಲ್ಲಾ ನಡೆಯುತ್ತಿದ್ದರೂ ಸುಮ್ಮನೆ ಕುಳಿತಿರುವುದು ನೋಡಿ ಆಶ್ಚರ್ಯವಾಗುತ್ತದೆ. ಮೊದಲಬಾರಿಗೆ 15 ದಿನಗಳಿಂದ ಎ.ಪಿ.ಎಂ.ಸಿ ವ್ಯವಹಾರ ಬಂದ್ ಆಗಿ, ನಿಮ್ಮ ಪರ್ಚೇಸ್ ಟ್ಯಾಕ್ಸ್ ಗೊಂದಲದಲ್ಲಿ ಆ ವ್ಯವಹಾರ ನಿಂತಿದೆ. ಅಲ್ಲಿ ಗೋಧಿ ಉತ್ಪನ್ನದ ಕಾರಣಕ್ಕೋಸ್ಕರ ಅಲ್ಲಿನ ವ್ಯವಹಾರಗಳೆಲ್ಲಾ ಪೂರ್ಣವಾಗಿ ನಿಂತಿವೆ. ಇಲ್ಲಿ ಗುಟ್ಕಾ ಗಲಾಟೆಯಲ್ಲಿ ಅಡಿಕೆ ವ್ಯಾಪಾರ ನಿಂತಿದೆ. ಅಂದರೆ ರೈತನ ಸಂಪೂರ್ಣ ಸರ್ವನಾಶವಾಗುತ್ತಿದ್ದರೂ ಸರ್ಕಾರ ಕೈ ಕಟ್ಟಿಕೊಂಡು ಕುಳಿತಿದೆ. ನೀವು ಅವರನ್ನು ಕರೆಸಿ ಮಾತನಾಡಿ ಕನ್‌ವಿನ್ಸ್ ಮಾಡಿ. ಗೋಧಿ ಉತ್ಪನ್ನದ ಬಗ್ಗೆ ನೀವು ಏನು ಟ್ಯಾಕ್ಸ್ ಹಾಕಿದ್ದೀರಿ ಅದನ್ನು ವಿತ್‌ಡ್ರಾ ಮಾಡಿಕೊಂಡು ರೈತ ಬದುಕುವಂತೆ ಮಾಡಿ. ಒಂದು ಚೀಲಕ್ಕೆ ಸುಮಾರು 50

ರೂಪಾಯಿ ತೆರಿಗೆ ಅಂದರೆ ಜಾಸ್ತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಗೋಧಿ ವಿಚಾರದಲ್ಲಿ ಎಲ್ಲರೂ ಪಕ್ಷಾತೀತವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಇದು ಎಲ್ಲಾ ಆಸ್ಪತ್ರೆಗಳಿಗೆ ಸರಬರಾಜು ಮಾಡತಕ್ಕದ್ದು. ಅನೇಕ ವಿಧದಲ್ಲಿ ಪ್ರತಿಯೊಬ್ಬ ಸಾಮಾನ್ಯ ಜನರು ಬಡವರಿಂದ ಹಿಡಿದು ಎಲ್ಲರೂ ಉಪಯೋಗಿಸತಕ್ಕ ವಸ್ತು ಇದು. ಅವತ್ತಿನಿಂದ ಒಂದೇ ಸಮನೆ ಮನವಿ ಕೊಡುತ್ತಿದ್ದಾರೆ. ಅವರು ಕೂಡ ಬಂದು ಮನವಿ ಕೊಟ್ಟಿದ್ದಾರೆ. ನಾವು ಕೂಡ ಹೇಳಿದ್ದೇವೆ. ಈ ಬಗ್ಗೆ ಸರ್ಕಾರ ಒಂದು ಒಳ್ಳೆಯ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಹಣಕಾಸಿನ ಸಚಿವರನ್ನು ಅವರು ಭೇಟಿ ಮಾಡಿದರು. ನಿಯೋಗದವರು ಒಂದಲ್ಲ ಹತ್ತು ಬಾರಿ ಭೇಟಿ ಮಾಡಿದರು. ನಾಳೆ ಎಲ್ಲಾ ಬೇಕರಿಗಳು ಮುಚ್ಚಿದರೆ ಆಸ್ಪತ್ರೆಗೆ ಬೇಕಾದ ಆಹಾರ ಸರಬರಾಜಾಗುವುದು ಕಷ್ಟವಾಗುತ್ತದೆ. ಆಸ್ಪತ್ರೆಗೆ ಆಹಾರ ಸರಬರಾಜಾಗಬೇಕಾದುದು ಬಹಳ ಪ್ರಾಮುಖ್ಯವಾದುದು. ಇದು ರೋಗಿಗಳಿಗೆ ಬೇಕಾಗಿರತಕ್ಕ ಆಹಾರ, ಸಕ್ಕರೆ ರೋಗದವರಿಗೆ ಬೇಕಾಗಿರತಕ್ಕದ್ದು. ಗೋಧಿಯಿಂದ ತಯಾರಾಗತಕ್ಕ ಯಾವ ಯಾವ ಪದಾರ್ಥಗಳಿವೆ, ತಿಂಡಿ ತಿನಿಸುಗಳಿವೆ ಇವುಗಳಿಗೆ ಬೇಕಾದ ಗೋಧಿ ದೊರೆಯದೆ ಇನ್ನು ಒಂದು ವಾರದಲ್ಲಿ ಎಲ್ಲಾ ಬೇಕರಿಗಳನ್ನು ಮುಚ್ಚತಕ್ಕ ವ್ಯವಸ್ಥೆಗೆ ಹೊರಟಿದ್ದಾರೆ. ಸರ್ಕಾರ ಈ ದಿಸೆಯಲ್ಲಿ ಎಚ್ಚರಿಕೆ ವಹಿಸದಿದ್ದರೆ ಅತ್ಯಂತ ದೊಡ್ಡ ದುರಂತವಾಗುತ್ತದೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಈ) ಉತ್ತರ ಕರ್ನಾಟಕ ಭಾಗಗಳಲ್ಲಿ ಹತ್ತಿ ವ್ಯಾಪಾರ ಸ್ಥಗಿತಗೊಂಡಿರುವುದು.

ಶ್ರೀ ಚಂದ್ರಶೇಖರ ಎಂ. ಮಾಮನಿ (ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಕಳೆದ 21 ದಿನಗಳಿಂದ ಉತ್ತರ ಕರ್ನಾಟಕದಲ್ಲಿ ಹತ್ತಿ ಬೆಳೆಯತಕ್ಕ ಪ್ರದೇಶದಲ್ಲಿ ರೈತರು ತಂದಂಥ ಮಾಲು ವ್ಯಾಪಾರವಾಗುತ್ತಿಲ್ಲ. 21 ದಿನಗಳಿಂದ ಮಾರುಕಟ್ಟೆಯಲ್ಲಿ ವ್ಯಾಪಾರ ಸ್ಥಗಿತವಾಗಿದೆ. ಮೊದಲಿಗೆ ಲಾಸ್ಟ್ ಪಾಯಿಂಟ್‌ನಲ್ಲಿ ಏನು ಟ್ಯಾಕ್ಸ್ ಹಾಕುತ್ತಿದ್ದರು ಅದನ್ನು ಈಗ ಫಸ್ಟ್ ಪಾಯಿಂಟ್‌ನಲ್ಲಿ ಹಾಕಿದ್ದರಿಂದ ಹತ್ತಿಗೆ ಒಂದು ಟ್ಯಾಕ್ಸ್ ಕೊಡಬೇಕು, ಎಣ್ಣೆಗೆ ಒಂದು ಟ್ಯಾಕ್ಸ್ ಕೊಡಬೇಕು, ಹತ್ತಿ ಕಾಳಿಗೆ ಒಂದು ಟ್ಯಾಕ್ಸ್ ಕೊಡಬೇಕು, ಹಿಂಡಿಗೆ ಒಂದು ಟ್ಯಾಕ್ಸ್ ಕೊಡಬೇಕು. ಹೀಗೆ 4 ಸಾರಿ ಟ್ಯಾಕ್ಸ್ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಇದು ಕನ್ಸ್ಯೂಮರ್ಸ್‌ಗೆ ಬಹಳ ಭಾರವಾಗುತ್ತದೆ. ಮೊದಲು ಯಾವ ರೀತಿ ಇತ್ತು ಎಂದರೆ, ಲಾಸ್ಟ್ ಪಾಯಿಂಟ್‌ಗೆ ಟ್ಯಾಕ್ಸ್ ಮಾಡಬೇಕಾಗಿತ್ತು. ಮೊನ್ನೆ ದಿವಸ ಕರ್ನಾಟಕದಲ್ಲಿದ್ದಂಥ ಹತ್ತಿ ಬೆಳೆಯತಕ್ಕ ಎಲ್ಲಾ ಮಾರುಕಟ್ಟೆಯ ವ್ಯಾಪಾರಸ್ಥರು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು, ಮಾನ್ಯ ಆರ್ಥಿಕ ಮಂತ್ರಿಗಳನ್ನು ಭೇಟಿಯಾಗಿ